## ಪಾಠ 12

## ಸಭೆ:

# ಅದರ ಸಂಘಟನೆ

**ಅದರ ಸಂಘಟನೆಯಲ್ಲಿಯ ಅಂಶಗಳು**

**1. ಸಭೆಯು ಏನಾಗಿದೆ (ಕೊಲೊಸ್ಸೆ 1:18)?**

a. "ಶಿರಸ್ಸು" ಮತ್ತು "ದೇಹ" ಹೇಗೆ ಸಂಘಟನೆಯನ್ನು ಸೂಚಿಸುತ್ತವೆ? ಶಿರಸ್ಸಿನ ಅಧಿಕಾರದ ಬಗ್ಗೆ ಏನು (ಮತ್ತಾಯ 28:18)?

b. ರೋಮಾಪುರ 12:4, 5 ಸಂಘಟನೆಯನ್ನು ಹೇಗೆ ಸೂಚಿಸುತ್ತದೆ?

c. ಸಭೆಯಲ್ಲಿ ಮತ್ತು ಸಭೆಯ ಮೇಲೆ ಯಾರಿಗೆ ಪ್ರಧಾನ ಅಧಿಕಾರ ಇರುವುದು (ಎಫೆಸ 1:22, 23)?

**2. ಅದರ ಮೇಲ್ವಿಚಾರಕರು:**

a. ತೀತನು ಕ್ರೇತದಲ್ಲಿ ಯಾಕೆ ಬಿಡಲ್ಪಟ್ಟನು (ತೀತ 1:5)?

b. ಪ್ರತಿಯೊಂದು ಸಭೆಯಲ್ಲಿ ಪೌಲನು ಯಾರನ್ನು ನೇಮಿಸಿದನು (ಅಪೊಸ್ತಲರ ಕೃತ್ಯಗಳು 14:23)?

c. ಅಪೊಸ್ತಲರ ಕಾರ್ಯದಲ್ಲಿ ಅವರೊಂದಿಗೆ ಯಾರು ನಿಕಟವಾಗಿ ಸಂಬಂಧಿಸಲ್ಪಟ್ಟಿದ್ದರು (ಅಪೊಸ್ತಲರ ಕೃತ್ಯಗಳು 15:6, 22, 23)?

**3. ಅದರ ಸೇವಕರು:**

a. ಅಪೊಸ್ತಲರು ಏಳು ಜನರನ್ನು ಯಾಕೆ ನೇಮಿಸಿದರು (ಅಪೊಸ್ತಲರ ಕೃತ್ಯಗಳು 6:1-6)? ಅಂಥ ಜನರು ಅನಂತರದಲ್ಲಿ ಏನೆಂದು ಕರೆಯಲ್ಪಟ್ಟರು (1 ತಿಮೊಥೆ 3:8, 13)?

b. ಪೌಲನು ಫಿಲಿಪ್ಪಿ ಸಭೆಯನ್ನು ಹೇಗೆ ಕರೆದನು (ಫಿಲಿಪ್ಪಿ 1:1)?

**4. ಅದರ ಸದಸ್ಯರು – ಯಾವುದೆ ಬಹಿರಂಗ ಹುದ್ದೆಯಲ್ಲಿ ಕಾರ್ಯ ಮಾಡದವರು:**

a. ಒಟ್ಟಾಗಿ ಸಭೆಯನ್ನು ಅಪೊಸ್ತಲರು ಹೇಗೆ ಮಾತಾಡಿದರು (ಅಪೊಸ್ತಲರ ಕೃತ್ಯಗಳು 6:2)?

b. ದೇಹವು, ಸಭೆಯು ಯಾವುದರಿಂದ ರಚಿಸಲ್ಪಟ್ಟಿದೆ (1 ಕೊರಿಂಥ 12:14, 27)?

c. ಸಭೆಯು ಏನೆಂದು ಸಹ ಕರೆಯಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 20:28)?

**5. ಅದರ ಪೂರ್ಣ ನಾಯಕತ್ವ – ಐದು ಪಟ್ಟು ವರ ಯಾವುದು (ಎಫೆಸ 4:8-11)?**

a. ಅಪೊಸ್ತಲರು - ಕ್ರಿಸ್ತನಿಗಾಗಿ ಪ್ರತ್ಯಕ್ಷ ದರ್ಶಿಗಳಿಗಾಗಿ ಸಾಕ್ಷಿ ಕೊಡುವುದು ಮತ್ತು ಪ್ರಕಟಿಸುವುದು. ಈಗ ಯಾವ ಅರ್ಥದಲ್ಲಿ ಸಭೆಗೆ ಅಪೊಸ್ತಲರು ಇರುವರು? ನಿರ್ಣಾಯಕರಂತೆ, ಅವರ ಸಾಕ್ಷಿಯು ಹೊಸ ಒಡಂಬಡಿಕೆಯನ್ನು ಒಂದೇ ಮಾರ್ಗದರ್ಶಿಯಂತೆ ಪ್ರಕಟಿಸಿತು.

b. ಪ್ರವಾದಿಗಳು - ಪ್ರಕಟಿಸಲು ಮತ್ತು ಬೋಧಿಸಲು; *ಈಗ*, ಬೋಧಿಸಲು.

c. ಸುವಾರ್ತಿಕರು - ಸುವಾರ್ತೆಯನ್ನು ಪ್ರಸಂಗಿಸಲು.
d. ಸಭಾಪಾಲಕರು - ಕಾಯಲು, ಉಣಬಡಿಸಲು ಮತ್ತು ಮಂದೆಯನ್ನು ಸಂರಕ್ಷಿಸಲು.
e. ಉಪದೇಶಿಗಳು - ಎಲ್ಲಾ ವಯಸ್ಸಿನವರಿಗೆ ಬೋಧಿಸಲು.

**ಯೋಚಿಸಲು ಸಂಗತಿಗಳು**

1. **ಮೊದಲಿನವುಗಳಿಂದ, ಸಭೆಯ ಸಂಘಟನೆಯಲ್ಲಿಯ ಎಲ್ಲಾ ಅಂಶಗಳ ಹೆಸರು ಹೇಳಿರಿ.**
2. **ಈ ಎಲ್ಲಾ ಸಂಗತಿಗಳು ಇಲ್ಲದೇ ಸಭೆಯು ಪೂರ್ಣವಾಗಿ ಸಂಘಟಿಸಲ್ಪಡಬಹುದೋ?**
3. **ಹಿರಿಯರು ಮತ್ತು ಡೀಕನರು ಇಲ್ಲದೇ ಸಭೆಯು ಎಷ್ಟು ಕಾಲ ಕಾರ್ಯಮಾಡಬಹುದು?**
4. **ಮೇಲೆ ಹೇಳಿದ ಐವರು, ನಾಯಕರು ಯಾಕೆ ಮೊದಲು ಪ್ರೇರೇಪಿಸಲ್ಪಟ್ಟರು (ಎಫೆಸ 4:12)?**
   a. ಅಂಥ ಪ್ರೇರೇಪಣೆಯು ಎಷ್ಟರ ವರೆಗೆ ಮುಂದುವರೆಯ ಬೇಕು (ಎಫೆಸ 4:13)?
   b. ಈ ಪ್ರೇರೇಪಣೆಯ ಅವಶ್ಯಕತೆ ಯಾಕೆ (ಎಫೆಸ 4:14, 15)?

**ಸಭೆಯ ಹಿರಿಯರಿಗಾಗಿ ಪದಗಳು – ಅಧ್ಯಯನಕ್ಕಾಗಿ ಕೊಡಲ್ಪಟ್ಟಿವೆ**

| **ಗ್ರೀಕ್:** | **ಬಾಷಾಂತರ:** | **ಉಲ್ಲೇಖಗಳು:** |
|---|---|---|
| Episkopos | ಅಧ್ಯಕ್ಷರು | ಅಪೊಸ್ತಲರ ಕೃತ್ಯಗಳು 20:28; ಫಿಲಿಪ್ಪಿ 1:1; 1 ತಿಮೊಥೆ 3:1; ತೀತ 1:7 |
| Presbuteros | ಪ್ರೆಸ್ಬಿಟರ್ - ಹಿರಿಯ | ಅಪೊಸ್ತಲರ ಕೃತ್ಯಗಳು 14:23; 1 ತಿಮೊಥೆ 5:1, 17; ತೀತ 1:5; 1 ಪೇತ್ರ 5:1 |
| Poimen | ಪಾಸ್ಟರ್ - ಕುರುಬ | ಎಫೆಸ 4:11; 1 ಪೇತ್ರ 2:25; 5:1, 2 |
| Proistemi | ನಿಮ್ಮ ಮೇಲೆ ಅಧಿಕಾರ, ನಡಿಸು | ರೋಮಾಪುರ 12:8; 1 ಥೆಸಲೊನೀಕ 5:12; 1 ತಿಮೊಥೆ 5:17 |
| Hegeomai | ನಡಿಸು, ಅಧಿಕಾರ ನಡಿಸು | ಇಬ್ರಿಯ 13:7, 17, 24 |

1. **"ಅಧ್ಯಕ್ಷ" ಎಂಬುದರ ಅರ್ಥವೇನು?**
   ಕಾಯುವವನು, ಕಾವಲುಗಾರನು, ಮೇಲ್ವಿಚಾರಕನು, ಮುಖ್ಯಸ್ಥನು.
2. **"ಪ್ರೆಸ್ಬಿಟರ" ಮತ್ತು "ಹಿರಿಯ" ಎಂಬುದರ ಅರ್ಥ ಕೊಡಿರಿ.**
   ಅನುಭವದಲ್ಲಿ ಮುಂದುವರಿದವನು, ಹಿರಿಯ, ವಯಸ್ಸಾದವ; ಸಭೆಗಳ ಮೇಲೆ ಅಧ್ಯಕ್ಷತೆ ವಹಿಸುವವರು.
3. **"ಪಾಸ್ಟರ" ಮತ್ತು "ಕುರುಬ" ಇವುಗಳ ನಿರೂಪಣೇ ಕೊಡಿರಿ.**
   ಒಂದಾಗಿ ತೆಗೆದು ಕೊಂಡರೆ, ಇವರಿಗೆ ಇತರರು ಸಂರಕ್ಷಣೆಗಾಗಿ, ಮಾದರಿಗಳಿಗಾಗಿ ಮತ್ತು ನಡಿಸುವಿಕೆಗಾಗಿ ಒಪ್ಪಿಸಲ್ಪಟ್ಟಿರುತ್ತಾರೆ.
4. **"ಆಳುವದಕ್ಕಾಗಿ" ಎಂಬುದು ಯಾವ ಅರ್ಥಭಾವನೆ ಕೊಡುತ್ತದೆ?**
   ನಾಯಕನಾಗಿರಲು, ಆಜ್ಞಾಪಿಸಲು, ಮೇಲೆ ಇರಲು.
5. **"ನಡಿಸಲು" ಎಂಬುದರಿಂದ ಯಾವ ಅರ್ಥವಾಗುತ್ತದೆ?**
   ನಿರ್ದೇಶಿಸು, ಮೇಲ್ವಿಚಾರಣೆ ಮಾಡು.

6. **“ಮೇಲ್ವಿಚಾರಕರು,” “ಸಭಾಪಾಲಕರು,” “ಕುರುಬರು” ಮತ್ತು “ಆಳುವವರು” ಒಂದೇ ಹುದ್ದೆಯನ್ನು ಹೇಗೆ ಸೂಚಿಸುತ್ತಾರೆ?**
   ಕರ್ತವ್ಯಗಳು ಒಂದೇ. ಆದುದರಿಂದ ಕೆಲಸಗಳು ಒಂದೇಯಾಗಿರುತ್ತವೆ.
7. **“ಸಭಾಪಾಲಕರು” (ಎಫೆಸ 4:11) ಎಂಬ ಪದವು ಆಧುನಿಕ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದೋ?**
   ಇಲ್ಲ, “ಸಭೆಯ ಸಭಾಪಾಲಕನು” ಪೂರ್ಣವಾಗಿ ಪರಿಶುದ್ಧ ಬರಹದ ಬೋಧನೆಯಲ್ಲಿ ಅಗತ್ಯಯುಳ್ಳವನಾಗಿದ್ದಾನೆ.

© 2009 Truth for Today